# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **273** |
| **ಸದಸ್ಯರ ಹೆಸರು** | : | **ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **15.02.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಉಪ ಮುಖ್ಯಮಂತ್ರಿಗಳು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಐನಾಪೂರ ಏತ ನೀರಾವರಿ ಯೋಜನೆಯ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಯಾವಾಗ ನೀಡಲಾಗಿದೆ; ಹಾಗೂ ಸದರಿ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವಾಗ ನಿಗದಿಪಡಿಸಲಾದ ಹಣ ಎಷ್ಟು; | ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ರೂ.204.10 ಕೋಟಿ ಮೊತ್ತದ ಐನಾಪೂರ ಏತ ನೀರಾವರಿ ಯೋಜನೆಗೆ ಸರ್ಕಾರದ ಆದೇಶ ದಿನಾಂಕ:09.01.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಯೋಜನೆಯನ್ನು 2 ಹಂತಗಳಲ್ಲಿ ಕೈಗೊಳ್ಳಲು ಹಾಗೂ ಮೊದಲನೇ ಹಂತದಲ್ಲಿ ರೂ.125.25 ಕೋಟಿ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿದೆ. |
| ಆ) | ಕೃಷ್ಣಾ ನ್ಯಾಯಾಧೀಕರಣದನ್ವಯ ಕೆಳದಂಡೆ ಮುಲ್ಲಾಮಾರಿ ಯೋಜನೆಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು; ಅದರಲ್ಲಿ ಐನಾಪೂರ ಏತ ನೀರಾವರಿ ಯೋಜನೆಗೆ ನಿಗಧಿಪಡಿಸಲಾದ ನೀರಿನ ಪ್ರಮಾಣ ಎಷ್ಟು? ಈ ಯೋಜನೆಯಿಂದ ಚಿಂಚೋಳಿ ತಾಲ್ಲೂಕಿನ ಎಷ್ಟು ಹಳ್ಳಿಗಳ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ; | ಕೃಷ್ಣಾ ನ್ಯಾಯಾಧಿಕರಣದ (ಬಚಾವತ್) ತೀರ್ಪಿನನ್ವಯ ರಾಜ್ಯಕ್ಕೆ ಒಟ್ಟಾರೆ ಹಂಚಿಕೆಯಾಗಿರುವ 734 ಟಿಎಂಸಿ ನೀರಿನ ಪ್ರಮಾಣದಲ್ಲಿ ಕೆಳದಂಡೆ ಮುಲ್ಲಾಮಾರಿ ಯೋಜನೆಗೆ 2.61 ಟಿ.ಎಂ.ಸಿ ಹಂಚಿಕೆಯಾಗಿದ್ದು, ಸದರಿ ಪ್ರಮಾಣದಲ್ಲಿ 0.34 ಟಿಎಂಸಿ ನೀರನ್ನು ಐನಾಪೂರ ಏತ ನೀರಾವರಿ ಯೋಜನೆಗೆ ಹಂಚಿಕೆ ಮಾಡಲಾಗಿದೆ.<br>ಐನಾಪೂರ ಏತ ನೀರಾವರಿ ಯೋಜನೆಯಡಿ ಚಿಂಚೋಳಿ ತಾಲ್ಲೂಕಿನ ಐನಾಪೂರ ಮತ್ತು 17 ಗ್ರಾಮಗಳ ಸುಮಾರ 3,710 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. |
| ಇ) | ಸದರಿ ಯೋಜನೆಯ ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಎಷ್ಟು; ಈ ಸಂಬಂಧ ಸದರಿ ಯೋಜನೆಯ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ; | ಸದರಿ ಯೋಜನೆಯ ಮೊದಲನೇ ಹಂತದ ರೂ.125.25 ಕೋಟಿ ಮೊತ್ತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆನ್ನು ಆಹ್ವಾನಿಸಲಾಗಿದ್ದು, ಅನುದಾನ ಲಭ್ಯತೆ ಅನುಸಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅಗತ್ಯ ಕ್ರಮ ವಹಿಸಲಾಗುವುದು. |
| ಈ) | ಯೋಜನೆ ಪ್ರಾರಂಭವಾಗದಿರುವ ಕುರಿತು ಯೋಜನಾ ವ್ಯಾಪ್ತಿಯ ರೈತರು ಸಹಿ ಸಂಗ್ರಹ ಚಳುವಳಿ ಪ್ರಾರಂಭ ಮಾಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು; 2024-25ನೇ ಮುಂಗಡ ಪತ್ರದಲ್ಲಿ ಈ ಯೋಜನೆಗೆ ಅಗತ್ಯವಾದ ಅನುದಾನ ಒದಗಿಸಲಾಗುವುದೇ? (ಮಾಹಿತಿ ನೀಡುವುದು). | |

**ಸಂಖ್ಯೆ:ಜಸಂಇ 22 ಎಂಎಲ್ಎ 2024**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ